# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ**
**(ವಿಧಾನಸಭಾ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1357**

**ಉತ್ತರಿಸಬೇಕಾದ ದಿನಾಂಕ : 18-12-2025**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು 3 ಲಕ್ಷದಿಂದ 5 ಲಕ್ಷಕ್ಕೆ ಏರಿಸಲಾಗಿದೆ; ಹೆಚ್ಚುವರಿ ಮಾಡಿರುವ ಸದರಿ 5 ಲಕ್ಷ ಸಾಲದ ಮೊತ್ತವನ್ನು ಪ್ರಸ್ತುತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದುವರೆಗೆ ಪೂರ್ಣ ಪ್ರಮಾಣದಲ್ಲಿ ಎಷ್ಟು ವಿತರಣೆ ಮಾಡಲಾಗಿದೆ. | ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಅಲ್ಪಾವಧಿ ಕೃಷಿ ಸಾಲ ವಿತರಿಸುವ ಯೋಜನೆಯಡಿಯಲ್ಲಿ ಸರ್ಕಾರ 2023–24 ನೇ ಸಾಲಿನಿಂದ ಸಾಲದ ಮಿತಿಯನ್ನು ರೂ.3 ಲಕ್ಷದಿಂದ ರೂ.5 ಲಕ್ಷಗಳವರೆಗೆ ಹೆಚ್ಚಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ 2025–26 ನೇ ಸಾಲಿನ ನವೆಂಬರ್ ಅಂತ್ಯದ ವರೆಗೆ ರೂ.3 ಲಕ್ಷದಿಂದ ರೂ.5 ಲಕ್ಷಗಳವರೆಗಿನ ಮಿತಿಯಲ್ಲಿ 2,253 ರೈತರಿಗೆ ರೂ.107.06 ಕೋಟಿಗಳ ಸಾಲವನ್ನು ವಿತರಿಸಲಾಗಿದೆ. |
| ಆ) | ಕೃಷಿ ಅಭಿವೃದ್ಧಿಗಾಗಿ ಶೇ.3ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು ರೂ.10 ಲಕ್ಷದಿಂದ 15 ಲಕ್ಷಕ್ಕೆ ಏರಿಕೆ ಮಾಡಿರುವ ಈ ರೀತಿಯ ಸಾಲದ ಮೊತ್ತವನ್ನು ಪ್ರಸ್ತುತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದುವರೆಗೆ ಪೂರ್ಣ ಪ್ರಮಾಣದಲ್ಲಿ ಎಷ್ಟು ವಿತರಣೆ ಮಾಡಲಾಗಿದೆ. | ರೈತರಿಗೆ ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆಯಡಿಯಲ್ಲಿ. ಸರ್ಕಾರ 2023–24 ನೇ ಸಾಲಿನಿಂದ ಸಾಲದ ಮಿತಿಯನ್ನು ರೂ.10 ಲಕ್ಷದಿಂದ ರೂ.15 ಲಕ್ಷಗಳಿಗೆ ಹೆಚ್ಚಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ 2025–26ನೇ ಸಾಲಿನ ನವೆಂಬರ್ ಅಂತ್ಯದ ವರೆಗೆ ರೂ.10 ಲಕ್ಷದಿಂದ ರೂ.15 ಲಕ್ಷಗಳವರೆಗಿನ ಮಿತಿಯಲ್ಲಿ 8 ರೈತರಿಗೆ ರೂ.90 ಲಕ್ಷಗಳ ಸಾಲವನ್ನು ವಿತರಿಸಲಾಗಿದೆ. |

| | | |
|---|---|---|
| ಇ) | ಯಾವ ಕಾಲಮಿತಿಯೊಳಗೆ ಸದರಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಏರಿಕೆ ಮಾಡಿರುವ ಹೆಚ್ಚುವರಿ ಹಣ ಹಾಗೂ ಸದರಿ ಕೃಷಿ ಅಭಿವೃದ್ಧಿಗಾಗಿ ಶೇ.3ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಹೆಚ್ಚುವರಿ ಹಣವನ್ನು ಅರ್ಹ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದಲ್ಲಿ ಸಿಗುವಂತೆ ಮಾಡಲು ಅಗತ್ಯ ಹಾಗೂ ಸೂಕ್ತ ಕ್ರಮ ವಹಿಸಲಾಗುವುದು? | ಸಹಕಾರ ಸಂಸ್ಥೆಗಳು ವಾಣಿಜ್ಯ ಬ್ಯಾಂಕಿನಲ್ಲಿರುವಂತೆ ಹೆಚ್ಚಿನ ಠೇವಣಿಯನ್ನು ಸಂಗ್ರಹಿಸಲು ಸಾಧ್ಯವಾಗದಿರುವುದರಿಂದ ರೈತರಿಗೆ ವಿತರಿಸುವ ಶೇ.60 ರಷ್ಟು ಪ್ರಮಾಣದ ಸಾಲದ ಮೊತ್ತಕ್ಕೆ ನಬಾರ್ಡ್ ನೀಡುವ ಸಾಲವನ್ನು ಅವಲಂಬಿಸಿರುತ್ತವೆ. ಡಿಸಿಸಿ ಬ್ಯಾಂಕುಗಳು ನಬಾರ್ಡ್‌ನಿಂದ ಸಾಲ ಪಡೆಯಲು ನಬಾರ್ಡ್‌ನ ಸಾಲ ನೀತಿಯನ್ನು ಅನುಸರಿಸಬೇಕಿದ್ದು, ಇದರನ್ವಯ ಹಿಂದಿನ ಮೂರು ವರ್ಷದ ಸರಾಸರಿ ಸಾಲ ವಿತರಣೆ ಬೆಳವಣಿಗೆ ಆಧಾರದ ಮೇಲೆ ಪ್ರತಿ ವರ್ಷದ ಸಾಲ ವಿತರಣೆಯ ಗುರಿಯನ್ನು ನಿಗದಿಪಡಿಸಬೇಕಿದ್ದು, ಈ ಮೊತ್ತಕ್ಕೆ ಮಾತ್ರ ಶೇ.60 ರಷ್ಟು ಪುನರ್ಧನ ನಬಾರ್ಡ್‌ನಿಂದ ದೊರೆಯಲಿದೆ.<br><br>ಇದರ ಆಧಾರದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಗೆ 2025–26 ನೇ ಸಾಲಿಗೆ ರೂ.3 ಲಕ್ಷ ಒಳಗೊಂಡಂತೆ ಸಹಕಾರ ಸಂಸ್ಥೆಗಳ ಮೂಲಕ 1,15,822 ರೈತರಿಗೆ ರೂ. 1988.53 ಕೋಟಿಗಳ ಅಲ್ಪಾವಧಿ ಬೆಳೆ ಸಾಲ ಮತ್ತು 11,000 ರೈತರಿಗೆ ರೂ.350 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲು ಗುರಿ ನಿಗದಿಪಡಿಸಲಾಗಿದೆ.<br><br>ಈ ಗುರಿಗೆ ಎದುರಾಗಿ ನವೆಂಬರ್ ಅಂತ್ಯದ ವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,00,492 ರೈತರಿಗೆ ರೂ. 1,930.42 ಕೋಟಿಯ ಬೆಳೆ ಸಾಲ ಮತ್ತು 7,958 ರೈತರಿಗೆ ರೂ.220.86 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಿದ್ದು, ಗುರಿ ತಲುಪಲು ಸಣ್ಣ ಮತ್ತು ಅತಿ ಸಣ್ಣ ರೈತರು, ಪ.ಜಾತಿ/ಪ.ಪಂಗಡದ ರೈತರು ಮತ್ತು ಹೊಸ ರೈತರಿಗೆ ಸಾಲ ವಿತರಣೆ ಪೂರೈಸಿದ ನಂತರ ಹೆಚ್ಚಿನ ಪ್ರಮಾಣದ ಜಮೀನು ಹೊಂದಿರುವ ರೈತರಿಗೆ ರೂ.3 ಲಕ್ಷಗಳಿಗಿಂತ ಹೆಚ್ಚಿನ ಮಿತಿಯ ಅಲ್ಪಾವಧಿ ಕೃಷಿ ಸಾಲ ಮತ್ತು ರೂ.10 ಲಕ್ಷಗಳಿಗಿಂತ ಹೆಚ್ಚಿನ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. |

| | | |
|---|---|---|
| | | ರೂ.3 ಲಕ್ಷಗಳಿಗಿಂತ ಹೆಚ್ಚಿನ ಮೊತ್ತವನ್ನು ಅಲ್ಪಾವಧಿ ಕೃಷಿ ಸಾಲದ ಮಿತಿಯಲ್ಲಿ 2023–24 ನೇ ಸಾಲಿನಲ್ಲಿ 1,390 ರೈತರಿಗೆ, 2024–25 ನೇ ಸಾಲಿನಲ್ಲಿ 2,006 ರೈತರಿಗೆ ಹಾಗೂ 2025–26 ನೇ ಸಾಲಿನಲ್ಲಿ ನವೆಂಬರ್ ಅಂತ್ಯದ ವರೆಗೆ 2,253 ರೈತರಿಗೆ ಸಾಲ ವಿತರಿಸಲಾಗಿದೆ. ರೂ.10 ಲಕ್ಷಗಳಿಗಿಂತ ಹೆಚ್ಚಿನ ಮೊತ್ತವನ್ನು ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮಿತಿಯಲ್ಲಿ 2023–24 ನೇ ಸಾಲಿನಲ್ಲಿ ಒಬ್ಬ ರೈತನಿಗೆ, 2024–25 ನೇ ಸಾಲಿನಲ್ಲಿ 6 ಜನ ರೈತರಿಗೆ ಹಾಗೂ 2025–26 ನೇ ಸಾಲಿನಲ್ಲಿ ನವೆಂಬರ್ ಅಂತ್ಯದ ವರೆಗೆ 8 ಜನ ರೈತರಿಗೆ ಸಾಲ ವಿತರಿಸಿದ್ದು, ವರ್ಷದಿಂದ ವರ್ಷಕ್ಕೆ ಹಂತ ಹಂತವಾಗಿ ಸಾಲದ ವಿತರಣೆಯನ್ನು ಹೆಚ್ಚಿಸಲು ಕ್ರಮವಹಿಸಲಾಗಿದೆ. |

**ಸಂಖ್ಯೆ: ಸಿಒ 336 ಸಿಎಲ್‌ಎಸ್ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ